ಲಾರಿಗಳು ಇವೆ ಮತ್ತು ಗಾಡಿಗಳು ನಿಂತಿದ್ದಾವೆ, ಕೆಲವನ್ನು ಸೀಜ್ ಮಾಡಿದ್ದಾರೆ. ಕೆಲವು ಹಾಗೆಯೇ ಹೋಗುತ್ತಿವೆ, ಇದೇ ಅದಕ್ಕೆ ಆಧಾರ. ಅದಕ್ಕೆ ದಯಮಾಡಿ ಉತ್ತರ ಕೊಡಿ.

ಶ್ರೀ ಆರ್.ವಿ. ದೇಶಪಾಂಡೆ: ಈಗ ಏನು ಮಾನ್ಯ ಯಡಿಯೂರಪ್ಪನವರು, ಮಾನ್ಯ ಸಿಂಧ್ಯಾರವರು ಈಗ ಹೇಳಿದ್ದಾರೆ, ಆ ಬಗ್ಗೆ ಯಲ್ಲಪ್ಪ ರೆಡ್ಡಿಯವರನ್ನು ಎನ್ಷಯರಿಗೆ ಕಳುಹಿಸಿರುವುದಾಗಿ ಹೇಳಿದ್ದೀರಿ. ಬಹಳ ಸಂತೋಷ. ನನಗೂ ಗೊತ್ತು, ಅವರ ಬಗ್ಗೆ ನಮಗೆ ಸಾಕಷ್ಟು ಗೌರವ ಇದೆ. ಆದರೆ ತಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ಬಹಳ ಸಂತೋಷ. ಯಲ್ಲಪ್ಪ ರೆಡ್ಡಿಯವರು ಕೊಟ್ಟ ವರದಿಯನ್ನು ಈ ಸದನದ ಮುಂದೆ ಇಡುವುದಕ್ಕೆ ತಾವು ಸಿದ್ಧರಿದ್ದೀರಾ? ಅದು ಬಹಳ ಮಹತ್ವ ಇದೆ. ಏಕೆಂದರೆ ಅಲ್ಲಿ ಬಹಳಷ್ಟು ಅಧಿಕಾರಿಗಳು ಸಿಕ್ಕಿದ್ದಾರೆ. ತಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ ಆದರೆ ಆ ವರದಿ ಏನು ಎಂದು ನಮಗೆ ಗೊತ್ತಾಗಬೇಕಾಗುತ್ತದೆ. ಆದ್ದರಿಂದ ಈ ಸದನದ ಮುಂದೆ ಆ ವರದಿಯನ್ನು ಇಡುವುದಕ್ಕೆ ಸಿದ್ಧ ಇದ್ದೀರೋ ಏನು ಎಂದತು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ: ಆ ವರದಿ ಬಂದಕೂಡಲೇ ಈ ಸದನದ ಮುಂದೆ ಇಟ್ಟು .....

ಶ್ರೀ ಮಾಟಾಳ್ ನಾಗರಾಜ್: ಎಷ್ಟು ದಿವಸದಲ್ಲಿ ವರದಿ ಕೊಡಬೇಕು ಎಂದು ಹೇಳಿದ್ದೀರಿ?

ಶ್ರೀ ಎಮ್.ಪಿ. ಕೇಶವಮೂರ್ತಿ: 31ಮಾರ್ಚ್ 94ರೊಳಗೆ ವರದಿ ಕೊಡಬೇಕೆಂದು ಲಿಖಿತ ಮೂಲಕ ತಿಳಿಸಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಎಲ್ಲಾ ಕಡೆ ಕಳ್ಳಸಾಗಾಣಿಕೆ ನಡೆಯುತ್ತಿದೆ. ನಾವು ಇಲ್ಲಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇವೆ. ಸರ್ಕಾರ ಸೂಕ್ತ ಉತ್ತರ ಕೊಡದಿದ್ದರೆ ಹೇಗೆ? ಅದನ್ನು ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

(ಉತ್ತರ ಇಲ್ಲ)

ಸೇಡಂ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ

176 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕೆಲವು ಶಿಕ್ಷಕರು ತಿಂಗಳಿಗೊಮ್ಮೆ ಕೇವಲ ಸಂಬಳ ತೆಗೆದುಕೊಳ್ಳಲು ಮಾತ್ರ ಬರುತ್ತಿದ್ದು ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ಹಾಗೂ ದೂರುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅವರನ್ನು ವರ್ಗಾವಣೆ ಮಾಡಲು ಮಾನ್ಯ ಮುಖ್ಯ ಮಂತ್ರಿಯವರು ಹಾಗೂ ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಆದೇಶ ನೀಡಿದ್ದರೂ ಸಹ ಜಿಲ್ಲಾ ಮಟ್ಟದ ಅಧಿಕಾರಿಗಳು ಆ ಆದೇಶಗಳನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಆದರಿಂದ ಸಂಬಂಧಪಟ್ಟ ಅಧಿಕಾರಿಗಳು ಆ ಶಾಲೆಗಳಲ್ಲಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸ ನಡೆಸುವ ಮನೋಭಾವ ಇಲ್ಲದಂತಾಗಿಲ್ಲವೇ?*

ಈ) *ಸರ್ಕಾರದ ಆದೇಶಗಳನ್ನು ಕಡೆಗಣಿಸುತ್ತಿರುವ ಅಂತಹ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮವೇನು?*

ಉ) ಇವುಗಳನ್ನು ಸರಿಪಡಿಸಿ ಆಯಾ ಶಾಲೆಗಳಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಸುಗಮವಾಗಿ ಸಾಗಲು ವ್ಯವಸ್ಥೆ ಯಾವಾಗ ಮಾಡಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಇಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ ಎಲ್ಲಾ ಪ್ರಶ್ನೆಗಳಿಗೆ "ಇಲ್ಲ" "ಇಲ್ಲ", "ಉದ್ಭವಿಸುವುದಿಲ್ಲ" ಎಂದು ಉತ್ತರಿಸಿದ್ದಾರೆ. ಸೇಡಂ ತಾಲ್ಲೂಕಿನ ಗುಂಡಪಲ್ಲಿ ಗ್ರಾಮದಲ್ಲಿ ಕೇವಲ ಒಬ್ಬರೇ ಒಬ್ಬರು ಮುಖ್ಯ ಗುರುಗಳು ಇದ್ದು ಇವರು ತಿಂಗಳಿಗೊಮ್ಮೆ ಆ ಗ್ರಾಮಕ್ಕೆ ವೇತನಕ್ಕಾಗಿ ಭೇಟಿ ನೀಡಿ ವೇತನ ಪಡೆಯುತ್ತಾರೆ. ಇದರ ಬಗ್ಗೆ ಆ ಗ್ರಾಮದ ಜನರಿಂದ ದೂರುಗಳು ಬಂದರೆ ಒಂದೆರಡು ವರ್ಷಗಳಿಂದ ನಾನು ಪತ್ರ ವ್ಯವಹಾರ ಮಾಡಿದರೆ, ಇವರ ವರ್ಗಾವಣೆಗಾಗಿ ಡಿ.ಡಿ.ಪಿ.ಐ ಯವರಿಗೆ ಆದೇಶ ನೀಡಿದರೆ, ಅವರು ಕ್ರಮ ಕೈಗೊಂಡಿಲ್ಲ ಏಕೆ? ಎರಡನೇ ಪ್ರಶ್ನೆಯಲ್ಲಿ ಅವರನ್ನು ವರ್ಗಾವಣೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಆದೇಶ ನೀಡಿದ್ದರೂ ಸಹ ಜಿಲ್ಲಾ ಮಟ್ಟದ ಅಧಿಕಾರಿಗಳು ಆದೇಶಗಳನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ "ಇಲ್ಲ" ಎಂದು ಉತ್ತರಗಳನ್ನು ಕೊಟ್ಟಿದ್ದಾರೆ. ಇಲ್ಲಾ ಎಂಬ ಉತ್ತರದಿಂದ ಈ ಇಲಾಖೆಯ ಅಧಿಕಾರಿಗಳು ಯಾವ ಕಡತಗಳನ್ನು ಸಹ ನೋಡುವುದಿಲ್ಲ. ಯಾವ ಜವಾಬ್ದಾರಿ ಇಲ್ಲದೆ ಉತ್ತರವನ್ನು ನೀಡುತ್ತಿದ್ದಾರೆ. ಏಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಶಿಕ್ಷಣ ಆಯುಕ್ತರು ಈ ವರ್ಷವೂ ಆದೇಶ ನೀಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಆದೇಶ ಪತ್ರ ಎಸ್ ಎಸ್ ಸಿ ಎಮ್ ಟಿ 474-93 ದಿನಾಂಕ 10-6-93, ಅಂತೆಯೇ ಡಿಡಿಪಿಐ ಅವರಿಗೆ ಆಯುಕ್ತರೂ ಸಹ ಒಂದು ಆದೇಶವನ್ನು ನೀಡಿದ್ದಾರೆ. ಪ್ರ.ಸಿ. ವರ್ಗ 14-93-94 ದಿನಾಂಕ 23-6-93ರಂದು ರವಾನಿಸಿದ್ದಾರೆ. ಆದರೂ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಇವರನ್ನು ಸಹ ವರ್ಗಾಯಿಸಲು ಆದೇಶಿಸಿದ್ದಾರೆ. ಅಂತೆಯೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಸೇರಿರುವ ಬಿಚ್ಚರೆಡ್ಡಿಯವರನ್ನು ವರ್ಗಾಯಿಸಲು ಆಯುಕ್ತರು ಡಿ ಡಿ ಪಿ ಐ ಅವರಿಗೆ ಒಂದು ಆದೇಶವನ್ನು ನೀಡಿದ್ದಾರೆ. ಆ ಆದೇಶ ಸಂಖ್ಯೆ ಪ್ರ.ಸಿ.....

ಅಧ್ಯಕ್ಷರು: ತಮಗೆ ಏನು ಬೇಕಾಗಿದೆಯೆಂದು ಕೇಳಿ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ: ವರ್ಗಾವಣೆ ಆದೇಶ ನೀಡಿದರೆ ಯಾವ ಕ್ರಮ ಇಲ್ಲದೆ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿಲ್ಲವೇ? ಇದನ್ನು ಸರಿಪಡಿಸಿ ಇಂತಹ ಶಿಕ್ಷಕರಿಗೆ ಶಿಕ್ಷೆಯನ್ನು ನೀಡಿ ಈ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಗುಂಡಪಲ್ಲಿ ಗ್ರಾಮದಲ್ಲಿ ಇರುವ ಶಿಕ್ಷಕರ ವರ್ಗಾವಣೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬರೆದಿದ್ದರೂ ಸಹ ವರ್ಗಾವಣೆ ಆಗಿಲ್ಲ ಎಂದು ನನ್ನ ಗಮನಕ್ಕೆ ತಂದಿದ್ದಾರೆ. ಆಪರೇಷನ್ ಬ್ಲ್ಯಾಕ್‌ಬೋರ್ಡ್ ಯೋಜನೆಯಲ್ಲಿ ಶಿಕ್ಷಕರನ್ನು ನೇಮಕ

ಮಾಡಿದರೆ, ಕೇಂದ್ರ ಸರ್ಕಾರದ ಜೊತೆ ಕರಾರು ಆಗಿರುತ್ತದೆ. ಇಂತಹ ಶಿಕ್ಷಕರನ್ನು ವರ್ಗಾವಣೆ ಅಥವಾ ಡೆಪ್ಯುಟೇಷನ್ ಮಾಡಬಾರದು ಎಂಬ ಕರಾರಿಗೆ ನಾವು ಬದ್ಧರಾಗಿರುತ್ತೇವೆ. ಇವರು ಆ ತರಹದ ಶಿಕ್ಷಕರು ಇರಬಹುದೋ ಏನೋ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಅವರ ವರ್ಗಾವಣೆ ಆಗದೆ ಇರಬಹುದು. ಇನ್ನು ಕೆಲವಾರು ಶಿಕ್ಷಕರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆ ಎಂದು ಏನು ಹೇಳಿದ್ದಾರೆ, ಅದು ನನಗೆ ಗೊತ್ತಿಲ್ಲ. ಆದರೆ ಅಂತಹದ್ದು ಏನಾದರೂ ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ಅವರು ಶಿಕ್ಷಕರ ಕೆಲಸ ಮಾಡುತ್ತಿಲ್ಲ, ಸಮಾಜ ದ್ರೋಹಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ: ಇವರು ಬ್ಲಾಕ್‌ಬೋರ್ಡ್ ಆಪರೇಷನ್ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಶಿಕ್ಷಕರಲ್ಲ. ಕಳೆದ 10-15 ವರ್ಷಗಳಿಂದ ಗುಂಡಪಲ್ಲಿಯಲ್ಲಿ ರಾಮರೆಡ್ಡಿ ಎನ್ನುವರು ಶಿಕ್ಷಕರಾಗಿದ್ದಾರೆ, ರಾಜರೆಡ್ಡಿ, ಬಿಚ್ಚರೆಡ್ಡಿ. ಇವರಿಬ್ಬರೂ ಕೂಡ ಆಪರೇಷನ್ ಬ್ಲ್ಯಾಕ್ ಬೋರ್ಡ್ ಶಿಕ್ಷಕರಲ್ಲ. ಇವರ ವರ್ಗಾವಣೆಯಾದರೂ ಸಹ ಡಿ.ಡಿ.ಪಿ.ಐ. ಯವರು ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳಿವೆ. ಅವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ಅಂತ ದಯಮಾಡಿ ತಿಳಿಸಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಕ್ರಿಮಿನಲ್ ಮೊಕದ್ದಮೆಗಳು ಇರುವುದನ್ನು ನನ್ನ ಗಮನಕ್ಕೆ ತಂದರೆ, ನಾನು ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇನೆ.

ಹೊಳೆನಾಗೂಪುರದ ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿ

71 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಹೊಳೆನಾಗೂಪುರ ಗ್ರಾಮದಲ್ಲಿರುವ ಕನ್ನಡ ಪ್ರಾಥಮಿಕ ಶಾಲೆ ಹಾಗೂ ಬೈಲಹೊಂಗಲ ಮಾಗಿಯವರ ಓಣಿಯಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗಳನ್ನು ಕೂಡಲೇ ದುರಸ್ಥಿ ಮಾಡಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

ಆ) ಸರ್ಕಾರದವರು ಆ ಶಾಲೆಗಳನ್ನು ಬೇಗನೆ ದುರಸ್ಥಿ ಮಾಡದೇ ಇರುವುದರಿಂದ ಅಲ್ಲಿರುವ ಕಟ್ಟಡದ ಸಾಮಾಗ್ರಿಗಳು ನಾಶವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆ 2 ಶಾಲಾ ಕಟ್ಟಡಗಳ ದುರಸ್ಥಿಗಾಗಿ ಜಿಲ್ಲಾ ಪರಿಷತ್ನವರು ಅಡಳಿತಾತ್ಮಕ ಮಂಜೂರಾತಿಯನ್ನು ನೀಡಿರುವರೇ ಹಾಗೂ ಎಷ್ಟು ಮೊತ್ತಕ್ಕೆ ಅಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ?

ಈ) ಆ ಶಾಲೆಗಳು ಶಿಥಿಲಗೊಂಡಿರುವುದರಿಂದ ಈಗ ಆ ತರಗತಿಗಳನ್ನು ಗುಡಿಯಲ್ಲಿ ನಡೆಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರದವರು ಕೂಡಲೇ ಆ ಶಾಲಾ ಕಟ್ಟಡದ ದುರಸ್ತಿ ಮಾಡಲು ಕ್ರಮ ಕೈಗೊಳ್ಳುವರೇ ಹಾಗೂ ಇನ್ನು ಎಷ್ಟು ದಿನಗಳಲ್ಲಿ ದುರಸ್ಥಿ ಮಾಡಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.